ಬಿಬಿಎಂಪಿ: ಸಿ ಆ್ಯಂಡ್ ಆರ್ ನಿಯಮಗಳ ಉಲ್ಲಂಘಿಸಿ ವರ್ಗಾವಣೆ ಮಾರ್ಪಾಟು

ಸಿ.ಇಗಳ 'ಪ್ರಭಾವ': ಸಿ.ಎಂ ಆದೇಶ ಬದಲು

ಪ್ರಜಾವಾಣಿ ವಾರ್ತೆ

ಅಧಿಕಾರದ ದಾಹ!

ಮುಖ್ಯಮಂತ್ರಿ ಆದೇಶದಂತೆ ಆಗಿರುವ ವರ್ಗಾವಣೆಯನ್ನು ಅನುಷ್ಠಾನಕ್ಕೆ ತಾರದೆ, ಕಚೇರಿ ಆದೇಶದಲ್ಲಿ ಮುಖ್ಯ ಎಂಜಿನಿಯರ್‌ಗಳ ಹುದ್ದೆಯನ್ನು ಬದಲಿಸಲಾಗಿದೆ. ಇದಕ್ಕೆ ಇಬ್ಬರು ಮುಖ್ಯ ಎಂಜಿನಿಯರ್‌ಗಳು ಮುಖ್ಯ ಆಯುಕ್ತರ ಮೇಲೆ ಹಾಕಿರುವ 'ಪ್ರಭಾವ'ವೇ ಕಾರಣ. ಈ ಇಬ್ಬರು ಎಲ್ಲ ಅಧಿಕಾರ ನಮ್ಮಲ್ಲೇ ಇರಬೇಕು ಎಂಬ ದಾಹದಿಂದ ಮುಖ್ಯಮಂತ್ರಿ ಆದೇಶವನ್ನೇ ಕಡೆಗಣಿಸಿದ್ದಾರೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ದೂರುತ್ತಿದ್ದಾರೆ.

ಪ್ರತಿಕ್ರಿಯೆ ಇಲ್ಲ: ಮುಖ್ಯ ಎಂಜಿನಿಯರ್‌ಗಳ ಬದಲಿ ವರ್ಗಾವಣೆ ಬಗ್ಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಸಂಪರ್ಕಿಸಿದಾಗ 'ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

ಬೆಂಗಳೂರು: ಬಿಬಿಎಂಪಿಯ 'ಇಬ್ಬರು ಮುಖ್ಯ ಎಂಜಿನಿಯರ್'ಗಳು 'ಪ್ರಭಾವ' ಬಳಸಿ ಮುಖ್ಯಮಂತ್ರಿ ಸೂಚನೆ ಮೇರೆಗೆ ಹೊರಡಿಸಲಾಗಿದ್ದ ಆದೇಶವನ್ನೂ ಬದಲಿಸಿ, ಹುದ್ದೆ ಪಡೆದುಕೊಂಡಿದ್ದಾರೆ.

ಬಿಬಿಎಂಪಿ ಯೋಜನೆ, ರಾಜಕಾಲುವೆ ವಿಭಾಗದಲ್ಲಿ ನಿರೀಕ್ಷಿತ ಕಾರ್ಯ ನಡೆಯುತ್ತಿಲ್ಲ. ರಾಜಕಾಲುವೆಗಳ ತೆರವು ಕಾರ್ಯಾಚರಣೆ ಸರಿಯಾಗಿ ನಡೆಯುತ್ತಿಲ್ಲ ಎಂದು ಮುಖ್ಯಮಂತ್ರಿಯವರ ಆದೇಶದ ಮೇರೆಗೆ ಮುಖ್ಯ ಎಂಜಿನಿಯರ್‌ಗಳನ್ನು ನ.2ರಂದು ವರ್ಗಾಯಿಸಲಾಗಿತ್ತು.

ಬಿಬಿಎಂಪಿ ಯೋಜನೆ ವಿಭಾಗ ಹಾಗೂ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ಎಂ. ಲೋಕೇಶ್ ಅವರನ್ನು ದಾಸರಹಳ್ಳಿ ವಲಯ ಮುಖ್ಯ ಎಂಜಿನಿಯರ್, ಮಹದೇವಪುರ ವಲಯದ ಅಧೀಕ್ಷಕ ಎಂಜಿನಿಯರ್ ಪ್ರವೀಣ್ ಲಿಂಗಯ್ಯ ಅವರಿಗೆ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆ ಹೆಚ್ಚುವರಿ, ಎರವಲು ಸೇವೆ ಮೇರೆಗೆ ಬೆಂಗಳೂರು ಸ್ಮಾರ್ಟ್ ಸಿಟಿಯ ಮುಖ್ಯ ಎಂಜಿನಿಯರ್ ವಿಯಾಯಿಕ ಸೂಗೂರು ಅವರನ್ನು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿ ವರ್ಗಾಯಿಸಲಾಗಿತ್ತು. ನ.7ರವರೆಗೂ ಈ ಆದೇಶ ಅನುಷ್ಠಾನಕ್ಕೇ ಬಂದಿರಲಿಲ್ಲ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನ.7ರಂದು ಕಚೇರಿ ಆದೇಶ ಹೊರಡಿಸಿ ನಗರಾಭಿವೃದ್ಧಿ ಇಲಾಖೆಯಿಂದ ಬಂದ ವರ್ಗಾವಣೆಯನ್ನು ಬದಲಾಯಿಸಿದ್ದಾರೆ. ಲೋಕೇಶ್ ಅವರನ್ನು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್, ಅಲ್ಲಿನ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಅವರನ್ನು ಬೃಹತ್ ನೀರುಗಾಲುವೆ ವಿಭಾಗಕ್ಕೆ ಹಾಗೂ ವಿಸಾಯಕ ಸುಗೂರ್ ಅವರನ್ನು ಯೋಜನಾ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಬುಧವಾರ ಇವರೆಲ್ಲ ಅಧಿಕಾರ ವಹಿಸಿಕೊಂಡಿದ್ದಾರೆ.

ವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿ ಆ್ಯಂಡ್ ಆರ್) ತಿದ್ದುಪಡಿ ಮಾಡಿ ಎರಡು ವರ್ಷಗಳಾಗಿದ್ದು, ಇದರಂತೆ ಬಿಬಿಎಂಪಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಅವರ ಮೇಲಿನ ಹುದ್ದೆಗಳ ವಗಾವಣೆ, ಬಡ್ತಿ ಪ್ರಕ್ರಿಯೆಗಳು ನಗರಾಭಿವೃದ್ಧಿ ಇಲಾಖೆಯಿಂದಲೇ ಆಗಬೇಕಿದೆ. ಆದರೆ, 'ಇದನ್ನು ಮೀರಿ ಈ ಕಚೇರಿ ಆದೇಶವಾಗಿದೆ.

'ಬಿಬಿಎಂಪಿ ಮುಖ್ಯ ಆಯುಕ್ತರೂ ಪ್ರಧಾನ ಕಾರ್ಯದರ್ಶಿಯವರ ದರ್ಜೆಯವರಾಗಿದ್ದು ಅವರು ಕೆಲವೊಂದು ಆದೇಶ ಮಾಡಬಹುದಾಗಿದೆ. ಆದರೆ, ಇದು ಮುಖ್ಯ ಎಂಜಿನಿಯರ್‌ಗಳ ಮಟ್ಟದ ಲ್ಲಾಗಿರುವ ವರ್ಗಾವಣೆ. ಇದು ಸಿ ಆ್ಯಂಡ್ ಆರ್‌ಗೆ ವಿರುದ್ಧವಾಗಿದೆ. ಮುಂದಿನ ದಿನಗಳಲ್ಲಿ ಇದು ಬೇರೆ ರೀತಿಯ ಮಟ್ಟಕ್ಕೆ ಹೋದರೆ ಸಾಕಷ್ಟು ಸಮಸ್ಯೆಯುಂಟಾಗುತ್ತದೆ' ಎಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹೇಳಿದರು.

ರಾಮಯ್ಯ ಎವಲ್ಯೂಟ್ ಕಾರ್ಯಕ್ರಮ: 'ಸ್ಟಾರ್ ನವೋದ್ಯಮ ಪ್ರಶಸ್ತಿ' ಪ್ರದಾನ

'ನವೋದ್ಯಮದತ್ತ ಒಲವು: ಉತ್ತಮ ಬೆಳವಣಿಗೆ'

ಪ್ರಜಾವಾಣಿ ವಾರ್ತೆ

ರಾಮಯ್ಯ ಎವಲ್ಯೂಟ್ ಬುಧವಾರ ಆಯೋಜಿಸಿದ್ದ 'ಸ್ಟಾರ್ ನವೋದ್ಯಮ ಪ್ರಶಸ್ತಿ– 2022' ಕಾರ್ಯಕ್ರಮದಲ್ಲಿ ರಾಮಯ್ಯ ತಾಂತ್ರಿಕ ಸಂಸ್ಥೆಯ ಪ್ರಾಂಶುಪಾಲ ಡಾ. ಎಸ್‌ವಿಆರ್ ನಾಯ್ಡು, ರಾಮಯ್ಯ ಎವಲ್ಯೂಟ್ ಸಿಇಒ ಮುರಳೀಕೃಷ್ಣ ಗೋವಾಲಕೃಷ್ಣ, ಸಮರ್ಥ ರಾಘವ್ ನಾಗಭೂಷಣಂ, ಆರ್‌ಂಟಿ ನಿರ್ದೇಶಕ ಮತ್ತು ಜೆಇಎಫ್ ಉಪಾಧ್ಯಕ್ಷ ಎ.ಆರ್ ಸೀತಾರಾಂ, ಅಧ್ಯಕ್ಷ ಎಂ.ಆರ್ ಜಯರಾಮ್, ಬಿ.ವಿ. ನಾಯ್ಡು, ಆರ್‌ಐಟಿ ನಿರ್ದೇಶಕ ಎಂ.ಆರ್ ರಾಮಯ್ಯ, ಎಂ.ಆರ್ ಶ್ರೀನಿವಾಸಮೂರ್ತಿ, ಬಿ.ಎಸ್ ರಾಮಪ್ರಸಾದ್ ಪಾಲ್ಗೊಂಡಿದ್ದರು.

ರಾಮಯ್ಯ ಎವಲ್ಯೂಟ್ಸ್ ಮುಖ್ಯಸ್ಥ ಸಮರ್ಥ ರಾಘವ ನಾಗಭೂಷಣಂ ಮಾತನಾಡಿ, 'ಈ ಬಾರಿಯ ಪ್ರಶಸ್ತಿಗೆ ದೇಶದ ವಿವಿಧ ಭಾಗಗಳಿಂದ 182 ಅರ್ಜಿಗಳು ಸಲ್ಲಿಕೆಯಾಗಿದ್ದವು. ಎರಡು ಹಂತದ ಪರಿಶೀಲನೆಗೆ ಒಳಪಡಿಸಿ 18 ಕಂಪನಿಗಳನ್ನು ಮಾತ್ರ ಆಯ್ಕೆ ಮಾಡಿದ್ದೇವೆ. ಈ ಕಂಪನಿಗಳಿಗೆ ಗರಿಷ್ಠ ₹1 ಕೋಟಿ ಆರ್ಥಿಕ ಸಹಾಯ ಮಾಡುವುದರ ಜತೆಗೆ ಅವಶ್ಯಕ ಸೌಲಭ್ಯವನ್ನು ಒದಗಿಸುತ್ತೇವೆ' ಎಂದು ತಿಳಿಸಿದರು. ಗೋಕುಲ ಶಿಕ್ಷಣ ಫೌಂಡೇಷನ್ ಉಪಾಧ್ಯಕ್ಷ ಎಂ.ಆರ್.ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಎಂ.ಆರ್.ಶ್ರೀನಿವಾಸ ಮೂರ್ತಿ, ಬಿ.ಎಸ್.ರಾಮಪ್ರಸಾದ್, ಪ್ರಾಂಶುಪಾಲ ಡಾ.ಎಸ್. ವಿ.ಆರ್.ನಾಯ್ಡು ಇದ್ದರು.

> **ಭಾರತದಲ್ಲಿರುವ ಉದ್ಯಮದ ವಾತಾವರಣ ಬೇರೆ ದೇಶದಲ್ಲಿ ಇಲ್ಲ. ನಮ್ಮ ಸಂಸ್ಥೆ ಪ್ರಾಯೋಗಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ವಿದ್ಯಾರ್ಥಿಗಳು ಪರಿಶ್ರಮಪಟ್ಟರೆ ಯಶಸ್ಸು ಕಾಣಲು ಸಾಧ್ಯ**
>
> **ಜಯರಾಂ,** ಗೋಕುಲ ಶಿಕ್ಷಣ ಫೌಂಡೇಷನ್ ಅಧ್ಯಕ್ಷ

ರಾಮಯ್ಯ ಎವಲ್ಯೂಟ್ ಸಂಸ್ಥೆ ಎಕ್ಸಿಲೆಂಸಿಯನ್ಸ್ ಅಂಡ್ ಇನೊವೇಷನ್ ಸೆಂಟರ್ ಸ್ಥಾಪಿಸಿದ್ದು ಸ್ಟಾರ್ಟ್‌ಅಪ್ ಎಕ್ಸಿಲೆಂಟ್ ವೆಂಚರ್ ಎಲೈಟ್‌ಎಲೈಸ್ ಸಂಸ್ಥಾಪಕ ಬಿ.ವಿ.ನಾಯ್ಡು ಹೇಳಿದರು.

ರಾಮಯ್ಯ ಎವಲ್ಯೂಟ್ ಬುಧವಾರ ಆಯೋಜಿಸಿದ್ದ 'ಸ್ಟಾರ್ ನವೋದ್ಯಮ ಪ್ರಶಸ್ತಿ-2022' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ನವೋದ್ಯಮದ ಬೆಳವಣಿಗೆಗೆ ಪೂರಕವಾದ ವಾತಾವರಣ ಇದೆ. ಇದರಿಂದ ಯಶಸ್ಸು ಕಾಣಲು ಸಾಧ್ಯವಿದೆ. ಈ ಮೊದಲು ಪದವಿ ಮುಗಿಸಿದ ವಿದ್ಯಾರ್ಥಿಗಳು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳುತ್ತಿದ್ದರು. ಇಂದು ಕಾಲ ಬದಲಾಗಿದೆ. ತಾವು ಬೆಳೆಯುವುದರ ಜತೆಗೆ ನವೋದ್ಯಮವನ್ನು ಬೆಳೆಸುತ್ತಿದ್ದಾರೆ' ಎಂದು ಹೇಳಿದರು.

'ರಾಜ್ಯ ಸರ್ಕಾರ ಸಹ ನವೋದ್ಯಮಗಳಿಗೆ ಉತ್ತಮ ಪ್ರೋತ್ಸಾಹ ನೀಡುತ್ತಿದೆ. ಪ್ರತಿ ವರ್ಷ ನವೋದ್ಯಮಿಗಳನ್ನು ಗುರುತಿಸಿ ಅವರಿಗೆ ಆರ್ಥಿಕ ಸಹಾಯ ನೀಡುತ್ತಿದೆ. ಇವರ ಆಯ್ಕೆಯನ್ನು ಸಹ ಕೈಗಾರಿಕೋದ್ಯಮಿಗಳಿಗೆ ನೀಡಿರುವುದು ಸರ್ಕಾರದ ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆಯನ್ನು ತೋರಿಸುತ್ತದೆ' ಎಂದರು.

ನೆಟ್ಟಕಲ್ಲಪ್ಪ ಜನ್ಮದಿನ: ಖೇಲೊಯೊಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೇಲೂರು ಯುವ ಬಿಎಸ್‌ಎನ್‌ಡಿಪಿ ಯೋಜನೆಗೆ ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಶ್ರೀನಿವಾಸ್ ಬಾಬು ಚಾಲನೆ ನೀಡಿದರು. ಬಿಎಸ್‌ಎನ್‌ಡಿಪಿ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಕೆ. ಗುತ್ತೇದಾರ್, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂತರಾಜ್ ಆಯರ್, ರಾಜ್ಯ ಖಜಾಂಚಿ ಕೆ.ವಿ.ರಿವಿದಾಸ್ ಮತ್ತಿತರರು ಇದ್ದರು

ಬೇಲೂರು: ಕೆ.ಎ. ನೆಟ್ಟಕಲ್ಲಪ್ಪ ಅವರ ಜನ್ಮದಿನಾಚರಣೆ ಅಂಗವಾಗಿ ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ವತಿಯಿಂದ ಬೇಲೂರು ಯುವ ಬಿಎಸ್‌ಎನ್‌ಡಿಪಿ ಯೋಜನೆಗೆ ಚಾಲನೆ ನೀಡಲಾಯಿತು.

ಸಂಘದ ಕೇಂದ್ರ ಕಚೇರಿಯಲ್ಲಿ ನಡೆದ ಜನ್ಮದಿನ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಶ್ರೀನಿವಾಸ್ ಬಾಬು ಮಾತನಾಡಿ, 'ನೆಟ್ಟಕಲ್ಲಪ್ಪ ಜನ್ಮದಿನದ ಪ್ರಯುಕ್ತ ಈ ಯೋಜನೆಗೆ ಚಾಲನೆ ನೀಡುತ್ತಿರುವುದು ಸಂತಸದ ವಿಷಯ. ಹಿಂದುಳಿದ ವರ್ಗಗಳಿಗೆ ನೆಟ್ಟಕಲ್ಲಪ್ಪ ಅವರು ನೀಡಿದ ಕೊಡುಗೆ ಅಪಾರ' ಎಂದು ಸ್ಮರಿಸಿದರು.

ಬಿಎಸ್‌ಎನ್‌ಡಿಪಿ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಕೆ. ಗುತ್ತೇದಾರ್ ಮಾತನಾಡಿ, 'ಪ್ರಸ್ತುತ ದಿನಗಳಲ್ಲಿ ಕೆ.ಎನ್.ನೆಟ್ಟಕಲ್ಲಪ್ಪ ಅವರ ಆದರ್ಶಗಳು ಯುವ ಪೀಳಿಗೆ ತಿಳಿಯಬೇಕಿದೆ. ಅವರ ಸಿದ್ಧಾಂತ ಹಾಗೂ ಉದ್ದೇಶಗಳನ್ನು ಹಂತಹಂತವಾಗಿ ಜಾರಿಗೆ ತರಲು ಸಂಘಟನೆ ಶ್ರಮಿಸುತ್ತಿದೆ' ಎಂದರು.

'ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಮೊಬೈಲ್ ಫೋನ್ ಅತಿಯಾದ ಬಳಕೆಯಿಂದ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಯುವ ಸಮೂಹ ದಾರಿ ತಪ್ಪದಂತೆ ಶಿಕ್ಷಣ ನೀಡಲು ಹಾಸ್ಟೆಲ್‌ಗಳನ್ನು ನೆಟ್ಟಕಲ್ಲಪ್ಪ ಸ್ಥಾಪಿಸಿದ್ದರು. ಮೊಟ್ಟ ಮೊದಲ ಬಾರಿಗೆ ಗಂಜಿ ಕೇಂದ್ರ ತೆರೆದು ವಿದ್ಯಾರ್ಥಿಗಳಿಗೆ ನೆರವಾಗಿದ್ದರು' ಎಂದು ಬಣ್ಣಿಸಿದರು.

'ಯುವಜನರು ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಲೆಂದು ಡೆಕ್ಕನ್ ಅಥ್ಲೆಟಿಕ್, ಫೌಂಡೇಷನ್ ಸ್ಥಾಪಿಸಿ ನಾಡಿನ ಅನೇಕ ಕ್ರೀಡಾಪಟುಗಳಿಗೆ ಉತ್ತೇಜನ ನೀಡಿದ್ದರು. ಅವರ ಚಿಂತನೆಗಳನ್ನು ಪ್ರಸಾರ ಮಾಡಲು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಕ್ರೀಡಗಳನ್ನು ಆಯೋಜಿಸಲಾಗುವುದು' ಎಂದರು.

ಸಾಮೂಹಿಕ ವಿವಾಹ

ಬೇಲೂರು: ಬನಶಂಕರಿ ದೇವಸ್ಥಾನದ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ ವತಿಯಿಂದ ಉಚಿತ ಸಾಮೂಹಿಕ ವಿವಾಹವನ್ನು ಜ.26 ರಂದು ಆಯೋಜಿಸಲಾಗಿದೆ.

ಬನಶಂಕರಿ ದೇವಸ್ಥಾನದಲ್ಲಿ 24ನೇ ವರ್ಷ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರಾಜ್ಯದ ಯಾವುದೇ ಭಾಗದವರು ಜ.20ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಬನಶಂಕರಿ ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎ.ಎಚ್. ಬನವರಾಯ ತಿಳಿಸಿದ್ದಾರೆ.

ಈವರೆಗೆ ದೇವಸ್ಥಾನದ ವೇದಿಕೆ ವತಿಯಿಂದ 1,315 ಜೋಡಿಗಳ ವಿವಾಹ ನೆರವೇರಿಸಲಾಗಿದೆ. ಜಾತಿ, ಮತಭೇದವಿಲ್ಲದೆ ಒಂದೇ ಮಂಟಪದಲ್ಲಿ ವಿವಾಹ ನಡೆಸಲಾಗುತ್ತದೆ. ವಧುವರರಿಗೆ ವಸ್ತ್ರ, ಬಾಸಿಗ, ಕಂಕಣದಾರ, ಹೂವಿನ ಹಾರ, ಮಾಂಗಲ್ಯ, ಕಾಲುಂಗುರ, ಪೇಟಾ ಲಭ್ಯವಾಗುತ್ತದೆ. ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತದೆ ಎಂದು ಹೇಳಿದರು. ಮಾಹಿತಿಗೆ: 080-2671 2988.

ಜುಡೊ: ದಾನೇಶ್ವರಿಗೆ ಚಿನ್ನ

ಕೋಲಾರ: ಜಿಲ್ಲೆಯ ಎಂ.ದಾನೇಶ್ವರಿ ಬುಧವಾರ ಇಲ್ಲಿ ನಡೆದ ರಾಜ್ಯಮಟ್ಟದ ಪ್ರೌಢಶಾಲೆಯ 17ರ ವಯೋಮಿತಿಯ ಬಾಲಕಿಯರ ವಿಭಾಗದ ಜುಡೊ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಆಶ್ರಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನ 44 ಕೆ.ಜಿ ಒಳಗಿನವರ ವಿಭಾಗದಲ್ಲಿ ನಗರದ ಸಿದ್ಧಾರ್ಥ ಪ್ರೌಢಶಾಲೆಯ ಅವರು ಈ ಸಾಧನೆ ಮಾಡಿದರು.

ನಗರದಲ್ಲಿ ಇಂದು

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಮಧುಕುಮಾರ್ ಬಿ.ಎಂ., ಅತಿಥಿಗಳು: ಪಿ.ಎಲ್. ತಿಮ್ಮಣ್ಣ ಶಿರೀನ್, ಜೈನ್ ಬಿನಿಟ್ಟಾ, ಅಧ್ಯಕ್ಷತೆ: ರೆ.ಫಾ. ಜೋಸಫ್ ಡಿ'ಸೋಜಾ ಎಸ್.ಜೆ., ಸ್ಥಳ: ಸೇಂಟ್ ಜೋಸೆಫ್ ಇಂಡಿಯನ್ ಪ್ರೈಮರಿ ಶಾಲೆಯ ಆಟದ ಮೈದಾನ, ವಿಠ್ಠಲ ಮಲ್ಯ ರಸ್ತೆ, ಬೆಳಿಗ್ಗೆ 8.30

ದಿ ರಿಸೈಸ್ಸಾನ್ಸ್: ಚಿತ್ರಕಲೆ ಮತ್ತು ಛಾಯಾಚಿತ್ರಗಳ ಪ್ರದರ್ಶನ: ಉದ್ಘಾಟನೆ: ಡಿ.ಕೆ ಶಿವಕುಮಾರ್, ಅತಿಥಿಗಳು: ಪ್ರಿಯಾಂಕ್ ಖರ್ಗೆ, ಸಲೀಂ ಅಹ್ಮದ್, ಬಿ.ಎಲ್ ಶಂಕರ್, ಶತಿಕಾಂತ್ ಸಂಥಿಲ್, ದೊಡ್ಡಿ ಪಾಳ್ಯ ನರಸಿಂಹಮೂರ್ತಿ, ಆಯೋಜನೆ: ಜನಸ್ಪಂದನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10

ಸೂರ್ಯಪ್ರಕಾಶ್ ಕೆ. ಅವರ 'ಮೈಲ್ಡ್ ಮೂಮೆಂಟ್ಸ್' ಛಾಯಾಚಿತ್ರಗಳ ಪ್ರದರ್ಶನ: ಅತಿಥಿಗಳು: ಎಂ.ಎನ್. ಜಯಕುಮಾರ್, ರವೀಂದ್ರ ಭಟ್ಟ, ಡಾ. ಅಜಿತ್ ಹುಯಿಲಗೋಳ, ಬಿ. ಶ್ರೀನಿವಾಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಗಣಪತಿ ಪೂಜಾ ಕಾರ್ಯಕ್ರಮ: 'ಕಾಂತಾರ' ಚಲನಚಿತ್ರದ ಜನಪ್ರಭವಗಳ ಕುರಿತು ವಕೀಲರೊಂದಿಗೆ ಚರ್ಚೆ: ರಿಷಬ್ ಶೆಟ್ಟಿ, ಸಪ್ತಮಿ ಗೌಡ, ಅತಿಥಿಗಳು: ಸಿ.ಸಿ. ಪಾಟೀಲ್, ಪಿ.ಸಿ. ಮೋಹನ್, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: 7ನೇ ಮಹಡಿಯ ಸಭಾಂಗಣ, ವಕೀಲರ ಭವನ, ಮಧ್ಯಾಹ್ನ 2

ಫೌಂಡೇಶನ್ ದಿನದ ಆಚರಣೆ: ಅತಿಥಿಗಳು: ಎಂ. ವೆಂಕಯ್ಯನಾಯ್ಡು, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಡಿ.ವಿ ಸದಾನಂದ ಗೌಡ, ಕೆ. ಆರ್ ರಮೇಶ ಕುಮಾರ್, ಕೆ.

'ಬೈ ಟು ಕಾಫಿ' ನಾಟಕದ ದೃಶ್ಯ

'ಬೈ ಟು ಕಾಫಿ' ನಾಟಕ ಪ್ರದರ್ಶನ: ನಿರ್ದೇಶನ: ವಿನಯ್ ಪ್ರಸಾದಕುಮಾರ್, ಸಹಾಯಕ ನಿರ್ದೇಶನ: ಮಧುರ ವೈದ್ಯ, ವಿಶಿಕನ ವಿನ್ಯಾಸ: ಮಂಜಾ ನಾರಾಯಣ್, ಆಯೋಜನೆ: ಅಭಿಷೇಕ್ ಅಯ್ಯಂಗಾರ್, ಸ್ಥಳ: ರಂಗಶಂಕರ, ಸಂಜೆ 7.30

ಮುನಿಸ್ವಾಮಿ ರಾಜು, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾಮಂದಿರ, ಪಟ್ಟಾಲಿ ಕಾವಲ್, ಸಂಜೆ 5

ಚನ್ನಬಸಯ್ಯ ಗುಬ್ಬಿ ಅವರ ಜನ್ಮ ಶತಮಾನೋತ್ಸವ ಸಮಾರಂಭ:

ಚನ್ನಬಸಯ್ಯ ಗುಬ್ಬಿ

ಚಾಲನೆ: ಎಸ್. ಟಿ. ಸೋಮಶೇಖರ್, ಅಧ್ಯಕ್ಷತೆ: ಎಸ್. ಶಾಂತರಾಜು, ಅತಿಥಿಗಳು: ಡಾ.ಎಸ್. ರಾಜು, ರಾಜಣ್ಣ ಕೆ.ವಿ. ನಾಗರಾಜಮೂರ್ತಿ, ಮಲ್ಲಿಕಾರ್ಜುನ ಕಡಕೋಳ, ಬಾ.ಹಿ. ರಮಾಕುಮಾರಿ, ವೃಷಭ ಸಂಧ್ಯಾ ಶರ್ಮ, ಕೆ.ಎಂ. ಪ್ರಕಾಶ್, ಕೆ. ಎಂ. ತಿಪ್ಪೇಸ್ವಾಮಿ, ಎಸ್. ಜಯಣ್ಣ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಅಪಘಾತ: ಕಾರು ಚಾಲಕನಿಗೆ ಜೈಲು ಶಿಕ್ಷೆ

ಹೊನ್ನಾವರ (ಉತ್ತರ ಕನ್ನಡ): ಗೇರು ಸೊಪ್ಪ ಮಾಸಿಮನೆ ಸಮೀಪ ರಾಷ್ಟ್ರೀಯ ಹೆದ್ದಾರಿ 69ರಲ್ಲಿ ನಡೆದಿದ್ದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿ ಕಾರು ಚಾಲಕ ಬೆಂಗಳೂರಿನ ಮತ್ತಿಕೆರೆಯ ಕಾರ್ತಿಕ್‌ಗೆ ಇಲ್ಲಿನ ಸಿವಿಲ್ ಮತ್ತು ಜೆಎಂಎಫ್ ನ್ಯಾಯಾಲಯವು 3 ವರ್ಷ ಜೈಲು ಶಿಕ್ಷೆ ಹಾಗೂ ₹7,500 ದಂಡ ವಿಧಿಸಿ ತೀರ್ಪು ನೀಡಿದೆ. 2016ರಲ್ಲಿ ಅಪಘಾತ ಸಂಭವಿಸಿತ್ತು. ಕಾರ್ತಿಕ್ ಚಾಲನೆ ಮಾಡುತ್ತಿದ್ದ ಕಾರು ಹೊಡೆದ ಅದರಲ್ಲಿದ್ದ ವ್ಯಕ್ತಿ ಮೃತಪಟ್ಟು ಆರು ಜನ ಗಾಯಗೊಂಡಿದ್ದರು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L